REVIEW OF RESEARCH
ISSN: 2249-894X
IMPACT FACTOR : 5.7631(UIF)
UGC APPROVED JOURNAL NO. 48514
VOLUME - 8 | ISSUE - 9 | JUNE - 2019

# ಹಿಂದೂವಾದ ಮತ್ತು ಸಾಮಾಜಿಕ ನ್ಯಾಯ

ಶ್ರೀಮತಿ ಮಲ್ಲವ್ವ ಮಾದರ [1], ಡಾ.ಎಮ್.ಬಿ. ದಳಪತಿ [2]
[1]ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿನಿ , ರಾಜ್ಯಶಾಸ್ತ್ರ ವಿಭಾಗ , ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
[2] ರಾಜ್ಯಶಾಸ್ತ್ರ ವಿಭಾಗ, ಸಹ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು , ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

**ಸಾರಾಂಶ :**

ಹಿಂದೂವಾದ ಮತ್ತು ಸಾಮಾಜಿಕ ನ್ಯಾಯವೆಂಬುವುದು ಭಾರತ ದೇಶದಲ್ಲಿ ಉತ್ತರ ದಕ್ಷಿಣ ಧ್ರುವಗಳಿದ್ದಂತೆ. ವರ್ಣಭೇದ, ಜಾತಿಭೇದ, ಜನಾಂಗೀಯ ಭೇದ, ಲಿಂಗಭೇದ, ಅಸ್ಪೃಶ್ಯತಾ ಭೇದ ಮತ್ತು ವರ್ಗಭೇದಗಳು ಶತಶತಮಾನಗಳಿಂದ ಈ ಹಿಂದೂಧರ್ಮಕ್ಕೆ ಅಂಟಿಕೊಂಡ ಪಿಡುಗುಗಳಾಗಿವೆ. ಧರ್ಮ ಸುಧಾರಣೆಯಾಗದ ಹೊರತು ಮಿಕ್ಕುಳಿದ ಎಲ್ಲ ಸುಧಾರಣೆಗಳು ವ್ಯರ್ಥವಾಗುತ್ತವೆ. ಒಬ್ಬ ವ್ಯಕ್ತಿಯಾಗಲಿ, ವ್ಯಕ್ತಿ ಸಮೂಹವಾಗಲಿ, ಎಲ್ಲ ನಾಗರಿಕ ಸೌಲಭ್ಯಗಳಿಲ್ಲದೆ ಅವರ ಸ್ಥಿತಿಯು ತುಂಬಾ ಚಿಂತಾಜನಕವಾಗುತ್ತದೆ. ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ತರದ ಹೊರತು ರಾಷ್ಟ್ರ ಕಟ್ಟುವ ಪ್ರಕ್ರಿಯೆಯು ಪರಿಪೂರ್ಣವಾಗದು. ದಲಿತರಿಗೆ, ಅಸ್ಪೃಶ್ಯರಿಗೆ ಆಗುತ್ತಿರುವ ಅನ್ಯಾಯಗಳು ನಿಲ್ಲಬೇಕು. ದಲಿತರಿಗೆ ಕೊಡಮಾಡಿದ ಹಕ್ಕುಗಳು ಕಾಯ್ದೆಯಿಂದ ರಕ್ಷಿತವಾಗದೇ ಸಾಮಾಜಿಕ ನೈತಿಕತೆಯ ಪ್ರಜ್ಞೆಯಿಂದ ಮಾತ್ರ ರಕ್ಷಿತವಾಗಬಲ್ಲವು ಎಂಬ ಸತ್ಯವನ್ನು ತಿಳಿಯುವ ಕಾಲ ಬರಲಿ ಎಂದು ಹೇಳುತ್ತ ಬುದ್ಧ, ಬಸವ, ಸ್ವಾಮಿ ವಿವೇಕಾನಂದರು ಮತ್ತು ಕನಕದಾಸರು ಕಂಡರಿತ ಭಾರತೀಯ ರಾಷ್ಟ್ರ ಕಟ್ಟುವ ಕನಸು ಕೈಗೂಡುವಂತಾಗಲಿ ಎಂಬುದೇ ಈ ಲೇಖನದ ಮಹದಾಶಯವಾಗಿದೆ.



ಹಿಂದೂವಾದ ಮತ್ತು ಸಾಮಾಜಿಕ ನ್ಯಾಯಗಳೆರಡೂ ಭಾರತದಂತಹ ದೇಶದಲ್ಲಿ ಉತ್ತರ ದಕ್ಷಿಣ ಧೃವಗಳಿದ್ದಂತೆ. ಆದರೆ ಹಿಂದೂವಾದವೆಂದರೇನೆಂಬುದಕ್ಕೆ ಭಾರತದಲ್ಲಿ ಎಂದೆಂದಿಗೂ ಸರ್ವಸಮ್ಮತವಾದ ಸದಾಭಿಪ್ರಾಯ ಸಿಗುವುದು ಕಷ್ಟಸಾಧ್ಯ. ಇಂತಹ ಕಷ್ಟಸಾಧ್ಯಗಳ ಮಧ್ಯದ ವಿಷಯವನ್ನು ಚರ್ಚೆಗೆತ್ತಿಕೊಳ್ಳುವುದು ಒಂದು ಕುತೂಹಲಕಾರಿ ಮತ್ತು ಸವಾಲಿನಂತಹ ಸಂಗತಿಯಾಗಿದೆ.

ಹಿಂದೂವಾದವೆಂದರೇನೆಂಬುದನ್ನು ತಿಳಿಯುವ ಪೂರ್ವದಲ್ಲಿ ಹಿಂದೂವೆನ್ನುವ ಪದದ ಉಗಮವನ್ನು ನೋಡುವುದು ಒಳ್ಳೆಯದು. "ಹಿಂದೂ"ವೆನ್ನುವ ಪದವು ಭಾರತೀಯರಿಂದ ಉಗಮಿಸಿದ ಪದವಲ್ಲ. ಎರಡನೆಯದಾಗಿ ಹಿಂದೂವೆನ್ನುವುದು ಧರ್ಮವಾಚಕವಾಗಲಿ ಅಥವಾ ಜನಾಂಗೀಯವಾಚಕವಾಗಲಿ ಬಳಸಿದ ಪದವಲ್ಲ. 'ಹಿಂದೂ'ವೆನ್ನುವ ಪದವು ಪರ್ಷಿಯನ್ನರು ಕ್ರಿ.ಪೂ.೩೨೭ರ ಸುಮಾರಿಗೆ ಸ್ಥಳವಾಚಕವೆಂದು ಭಾರತೀಯರಿಗೆ ಬಳಸಿದ ಪದವಾಗಿದೆ. ಅಂದರೆ ಸಿಂದುವೆನ್ನಲು ಹೋಗಿ 'ಹಿಂದೂ'ವೆಂದು ಕರೆಯಲಾಗಿದೆ. ಸಿಂದೂಕೊಳ್ಳದಲ್ಲಿ ವಾಸಿಸುವ ಭಾರತೀಯರನ್ನು ಗುರುತಿಸಲು ಹೋಗಿ ತಮ್ಮ ಭಾಷೆಯಲ್ಲಿ "ಸ"ದ ಉಚ್ಚಾರವಿಲ್ಲದ್ದಕ್ಕೆ ಮತ್ತು 'ಸ'ದ ಬದಲು 'ಹ' ಎಂದು ಉಪಯೋಗಿಸಿದ್ದರ ಕಾರಣದಿಂದಾಗಿ "ಹಿಂದು"ವೆನ್ನುವ ಶಬ್ದವು ಪರ್ಷಿಯನ್ನರಿಂದ ಬಂದಿದೆ. ಹಾಗಾಗಿ ಇದು ಭಾರತೀಯರಿಗೆ ಬಳಸಿದ ಸ್ಥಳವಾಚಕ ಪದವಾಗಿದೆ.

ಆದರೆ ಕಾಲಾಂತರದಲ್ಲಿ ಈ ಪದವನ್ನು ಭಾರತೀಯ ಜನಾಂಗವನ್ನು ಗುರುತಿಸಲು ಮತ್ತು ಭಾರತೀಯರ ಧರ್ಮವನ್ನು ಗುರುತಿಸುವಲ್ಲಿ ಈ ಶಬ್ದವನ್ನು ಬಳಸಲಾಗಿದೆ. ಆದರೆ ಹಿಂದುವಾದವೆಂದರೇನೆಂಬುದಕ್ಕೆ ಈಗಾಗಲೇ ಹೇಳಿದಂತೆ ಖಚಿತವಾದ ಅಭಿಪ್ರಾಯವಿಲ್ಲ. ಹಿಂದೂವಾದದ ಪ್ರತಿಪಾದನೆಗೆಂದು ಒಂದು ಧರ್ಮದ ಚೌಕಟ್ಟಾಗಲಿ, ಒಂದು ನಿರ್ದಿಷ್ಟ ಧರ್ಮಗ್ರಂಥಗಳ ಚೌಕಟ್ಟಾಗಲಿ, ಒಂದು ನಿರ್ದಿಷ್ಟ ದೇವರ ಚೌಕಟ್ಟಾಗಲಿ ಇಲ್ಲವೆ ಇಲ್ಲ. ಒಂದು ವೇಳೆ ಇದೆ ಎಂದು

ಒಪ್ಪಿಕೊಂಡರೂ ಇವುಗಳ ಚಿಂತನೆಯಲ್ಲಿ ಸಾಮ್ಯತೆಗಳಿಲ್ಲ. ವೇದಗಳ, ಶಾಸ್ತ್ರಗಳ ಪುರಾಣಗಳ, ಶೃತಿಸ್ಮೃತಿಗಳ, ಅರಣ್ಯಕಗಳ, ಬ್ರಾಹ್ಮಣಕಗಳ, ಸಂಹಿತೆಗಳ, ರಾಮಾಯಣ ಮಹಾಭಾರತಗಳ ಚಿಂತನೆಗಳ ಪರಿಯು ಒಂದು ರೀತಿಯಾದರೆ ಉಪನಿಷತ್ತುಗಳ ಚಿಂತನೆಗಳ ಪರಿಯೇ ಬೇರೆಯಾಗಿವೆ. ಹಾಗಾಗಿಯೇ ಹಿಂದೂಗಳದ್ದು ವಿವಿಧತೆಗಳಿಗೆ ಮತ್ತು ವೈಷಮ್ಯತೆಗಳಿಗೆ ತವರು ಮನೆಯೆಂದು ವಾದಿಸುವುದು. ಶೈವಪಂತ, ವೈಷ್ಣವಪಂತ, ಸ್ಮಾರ್ಥಪಂತ ಮತ್ತು ಶಾಕ್ತಪಂತಗಳು ಎಂದು ಇಲ್ಲಿ ಎದ್ದು ಕಾಣುವುದು. ಇವೆಲ್ಲ ಚಿಂತನೆಗಳನ್ನು ವಿಶಾಲ ದೃಷ್ಟಿಯಿಂದ ವಿಭಜಿಸಿ ಜ್ಞಾನಕಾಂಡ ಮತ್ತು ಕರ್ಮಕಾಂಡ ಸನಾತನಿಗಳು ಎಂದು ಸಂಭೋಧಿಸುವುದು. ಜ್ಞಾನಮಾರ್ಗಕ್ಕೆ ಪ್ರಥಮ ಪ್ರಾಶಸ್ತ ಕೊಡುವುದು ಜ್ಞಾನಕಾಂಡದ ಸನಾತನ (ಅಂದರೆ ಹಳೆಯ ಅಥವಾ ಪ್ರಾಚೀನ)ವೆಂದು. ಧರ್ಮ ಮತ್ತು ಕರ್ಮವನ್ನು ಭಜಿಸಲು ಅಂದರೆ ಯಜ್ಞಯಾಗಾದಿ, ಪ್ರಾಣಿವಧೆ, ಲಿಂಗಭೇದ, ವರ್ಣಭೇದ, ಜಾತಿಭೇದ, ವರ್ಗಭೇದ ಮತ್ತು ಅಸ್ಪೃಶ್ಯತಾ ಭೇದಗಳು ಎಂದು ಹೇಳುವುದು. ಇವುಗಳಿಗೆ 'ಪಾಪ–ಪುಣ್ಯ, ಸ್ವರ್ಗ–ನರಕ, ಜನನ–ಮರಣ, ಸಾಕಾರ ನಿರಾಕಾರ ದೇವರು, ಶಾಕ್ತರು ಮತ್ತು ಸಸ್ಯಹಾರಿಗಳು ಮತ್ತು ದ್ರಾವಿಡರು ಹಾಗೂ ಆರ್ಯರೆಂಬ ಭೇದಗಳನ್ನು ತಳಕು ಹಾಕಿ ವಿಭಜಿಸಿ ಇವುಗಳ ತಾಕಲಾಟದಲ್ಲಿ ಮನಸ್ತಾಪಗಳಾಗಿ 'ಎಡಪಂಥೀಯ ಬಲಪಂಥೀಯ' ವಾದಿಗಳೆಂದು ವಿಭಜಿಸಲಾಯಿತು. ಈ ವಿಭಜನೆಯ ಭೇದಗಳ ಸಂಘರ್ಷತೆಯು ವೈರತ್ವಕ್ಕೆ ಕಾರಣವಾಯಿತು. ಹಾಗಾಗಿ ಇದು ಸಾವಿರಾರು ವರ್ಷಗಳ ಪರ್ಯಂತರ ಮುಗಿಯದ ಕಥೆಯಾಗಿ ಪರಿಣಮಿಸಿತು. ಈ ಭೇದಭಾವಗಳಲ್ಲಿ ಇಡೀ ಭಾರತೀಯರನ್ನು ದೇವರು, ದೈತ್ಯರು, ಶಾಕ್ತರು, ಸಸ್ಯಹಾರಿಗಳು ಎಂದು ವಿಭಜಿಸಿ ಈ ದೇಶವು ತನ್ನತನದ ಪ್ರಜ್ಞೆಯನ್ನೆ ಕಳೆದುಕೊಂಡಿತು. ತನ್ನತನದ ಪ್ರಜ್ಞೆಯಿಲ್ಲದ ಈ ದೇಶಕ್ಕೆ ಐಕ್ಯತೆಯ ಕೊರೆತೆಯಿಂದ ನರಳಿ ಪರಕೀಯ ದಾಸ್ಯತ್ವಕ್ಕೆ ಒಳಗಾಯಿತು. ಇಂದು ಸಹ ಮತೀಯ ಮಹಾಶಕ್ತಿಗಳು ಮಾನವೀಯತೆಯನ್ನೇ ನುಂಗಿ ಮೆಟ್ಟಿನಿಂತಿವೆ. ಈ ಸಂಘರ್ಷದಲ್ಲಿ ಒಟ್ಟು ಭಾರತೀಯರು ಕಳೆದುಕೊಂಡಿದ್ದೆ ಹೆಚ್ಚು. ಆದರೆ ಆಯಾ ಮತಪಂಥೀಯಗಳು ಪಡೆದುಕೊಂಡದ್ದು ಕಳೆದುಕೊಂಡದ್ದರ ಲೆಕ್ಕಾಚಾರದಲ್ಲಿಯೇ ಈ ದೇಶವು ಮುಂದುವರೆದಿದೆ. ಈ ದಾರುಣ ಸ್ಥಿತಿಯಿಂದ ಪಾರು ಮಾಡಲು ಈ ಭರತಭೂಮಿಯಲ್ಲಿ ಬುದ್ಧ, ಬಸವಾದಿ, ಶರಣಸಂತರು, ದಾಸ ದಾರ್ಶನಿಕರು, ಅನೇಕ ಚಿಂತಕರು ಹುಟ್ಟಿ ನಿಜಮಾನವೀಯ ಮೌಲ್ಯಗಳನ್ನು ಬೋಧಿಸಿದರೂ ಈ ದೇಶಕ್ಕೆ ಮರಳಿನಲ್ಲಿ ಎಣ್ಣೆ ಹೊಯ್ದಂತಾಯಿತು. ಜ್ಞಾನಕಾಂಡದ ಚಿಂತನೆಗಳು ಸಂಪೂರ್ಣವಾಗಿ ಕಣ್ಮರೆಯಾಗಿ ಏನಿದ್ದರೂ ಇಂದು ಕರ್ಮಕಾಂಡದ ಚಿಂತನೆಗಳೇ ನಮ್ಮ ಬದುಕಿನ ದಾರಿದೀಪಗಳು ಎನ್ನುವ ಹಂತಕ್ಕೆ ಈ ದೇಶವು ಬಂದು ನಿಂತಿದೆ. ಹಾಗಾಗಿ ಸಾರ್ವಜನಿಕ ಸದಾಭಿಪ್ರಾಯವೆಂಬುದು ಈ ದೇಶಕ್ಕೆ ನಿಲುಕದ ಗಗನಕುಸುಮವಾಗಿ ಹೋಗಿದೆ. ೨೯೬ ಸಂವಿಧಾನದ ನಿರ್ಮಾತೃಗಳಿಗೂ ಸಂವಿಧಾನ ರಚಿಸುವ ವೇಳೆಯಲ್ಲಿ ಯಾವುದೊಂದು ವಿಷಯಕ್ಕೂ ಒಮ್ಮತಕ್ಕೆ ಬರುವುದು ಅಸಾಧ್ಯವಾಗಿ ಹೋಯಿತು. ಈ ಕಾರಣದಿಂದಾಗಿ ರಾಷ್ಟ್ರದ ಲಾಂಛನವನ್ನು ಬೌದ್ಧಧರ್ಮದಿಂದ ಎರವಲಾಗಿ ಪಡೆಯಲಾಯಿತು. ಇದು ಹಿಂದುಗಳಲ್ಲಿಯ ಅನೈಕ್ಯತೆಯ ಅಟ್ಟಹಾಸ, ಒಗ್ಗಟ್ಟಿನ ಕೊರತೆ ಎಷ್ಟಿರಬೇಕೆಂಬುದರ ಚಿಂತನೆಗಳು ರಾಷ್ಟ್ರಪ್ರೇಮಿಗಳ ಎದೆ ಝಲ್ ಎನಿಸುತ್ತವೆ. ಭೌತಿಕ ಬದುಕಿಗೊಂದು ಧರ್ಮೋಆಧ್ಯಾತ್ಮಿಕ ಬದ್ಧತೆ ಇರಬೇಕೆಂಬ ನೀತಿಪಾಠ ನಡೆದು ತೋರಿಸಿದ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರನ್ನೇ ಈ ದೇಶ ಬಲಿ ಪಡೆಯುವಂತಾಯಿತು. ಡಾ॥ ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಕನಕದಾಸರಂತವರ ಚಿಂತನೆಗಳು ಪಾಂಡಿತ್ಯ ಪ್ರದರ್ಶಿಸಲಷ್ಟೆ ಈ ದೇಶಕ್ಕೆ ಉಪಯೋಗವಾದವೆ ಹೊರತು ನಿಜ ಬದುಕಿನಲ್ಲಿ ಮಾನಸಿಕ ಮೈಲಿಗೆ ತೊಳೆಯಲು ಬೇಡವಾದವು. ಖಾಸಗಿ ವರ್ತನೆ ಸಾರ್ವಜನಿಕ ವರ್ತನೆಯಂದು ವಿಭಾಗಿಸಿ ಇಂದೂ ಈ ದೇಶದ ಚಿಂತನೆಗಳನ್ನು ಮತ್ತು ಜನಾಂಗವನ್ನು ಕವಲು ದಾರಿಯಲ್ಲಿಟ್ಟಿರುವುದು ಬಹು ಸೋಜಿಗದ ಸಂಗತಿಯಾಗಿದೆ. ಕಳೆದ ೭೦ ವರ್ಷಗಳ ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲಿ ಸಂವಿಧಾನದ ಅನುಷ್ಠಾನವು ಈ ದೇಶದಲ್ಲಿ ಸೋತು ಹೋಗಿದೆ. ಹಾಗಾಗಿ ಹಿಂದೂವಾದ ಮತ್ತು ಸಾಮಾಜಿಕ ನ್ಯಾಯವೆನ್ನುವ ಚಿಂತನೆಗಳು ಈ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತಲೇ ನಡೆದಿವೆ. ಪ್ರಸ್ತುತದ ಭಾರತೀಯರ ಬದುಕೆಂದರೆ ಕರ್ಮಕಾಂಡದ ಚಿಂತನೆಗಳೇ ಆಗಿವೆ. ಹಾಗಾಗಿ ಇಂದಿನ ಸ್ವತಂತ್ರ್ಯ ಭಾರತದ ಚಿಂತನೆಗಳು ಎಂಬ ಪರಿಕಲ್ಪನೆಯಲ್ಲಿ ಈ ವಾದಗಳನ್ನು ಮಂಡಿಸುವದು ಅನಿವಾರ್ಯವು ಮತ್ತು ಅವಶ್ಯಕತೆಯಾಗಿದೆ. ಪ್ರಸ್ತುತ ಜನಮಾನಸದಲ್ಲಿ ತಮ್ಮ ಬದುಕನ್ನೇ ಕಳೆದುಕೊಂಡ ಈ ದೇಶದ ಶೂದ್ರಾತೀಶೂದ್ರರು ಮತ್ತು ಮಹಿಳೆಯರು ಕೇಳುವ ಪ್ರಶ್ನೆಯಾಗಿದೆ. ಈ ವಿಷಯವು ತುಂಬಾ ಜಟಿಲವೂ, ಸೂಕ್ಷ್ಮವೂ ಆಗಿದೆ.

ಇಂದಿನ ಹಿಂದೂವಾದವೆಂದರೆ ವರ್ಣಭೇದ, ಜನಾಂಗೀಯ ಭೇದ, ಜಾತಿಭೇದ, ಲಿಂಗಭೇದ, ಅಸ್ಪೃಶ್ಯತಾ ಭೇದ ಮತ್ತು ವರ್ಗಭೇದಗಳೆಂಬುದು ಅರ್ಥಗರ್ಭಿತವಾಗಿದೆ. ಶತಶತಮಾನದಿಂದ ಬದುಕನ್ನೇ ಕಳೆದುಕೊಂಡ ಶೂದ್ರಾತಿಶೂದ್ರರಿಗೆ ಇದು ಪ್ರಾಣದ ಪ್ರಶ್ನೆಯಾದರೆ ಶತಶತಮಾನಗಳಿಂದ ಧರ್ಮ ದೇವರುಗಳ ಹೆಸರಿನಲ್ಲಿ ಸವಲತ್ತುಗಳನ್ನು ಪಡೆದು ಬದುಕಿನ ಜಾತಿ ಹಿಂದುಗಳಿಗೆ ಇದೊಂದು ಪ್ರತಿಷ್ಠೆಯ ಪ್ರಶ್ನೆಯಾಗಿ ತೋರುತ್ತದೆ. ಕರ್ನಾಟಕದಲ್ಲಿ ೨೯೦೦೦ ಸಾವಿರ ಹಳ್ಳಿಗಳಿವೆ. ಇಡೀ ಭಾರತದಲ್ಲಿ ೫ ಲಕ್ಷದಷ್ಟು ಹಳ್ಳಿಗಳಿವೆ. ಆದರೆ ಒಂದೇ ಒಂದು ಹಳ್ಳಿ ಜಾತಿಯ ದೌರ್ಜನ್ಯಗಳಿಂದ, ಅಸ್ಪೃಶ್ಯತೆಯ ಯಾತನೆ ಮತ್ತು ನಿಂದನೆಯಿಂದ ಹೊರತಾಗಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಹಾಗಾಗಿ ಈ ವಿಷಯವು ತುಂಬಾ ಆಳವಾಗಿದೆ ಮತ್ತು ಜಟಿಲವಾಗಿದೆ. ಇಂದು ಹಿಂದೂಧರ್ಮ, ದೇವರು, ಧರ್ಮಗ್ರಂಥಗಳಲ್ಲಿ ಮತ್ತು ಜನಮಾನಸದಲ್ಲಿ ಆಳವಾಗಿ ಬೇರೂರಿ ಬಿಟ್ಟಿದೆ. ಭಾರತದ ಯಾವುದೇ ಸುಧಾರಣೆಯಾಗಬೇಕಾದರೂ ಧರ್ಮದ ಸುಧಾರಣೆಯಾಗಬೇಕಾಗುವುದು ಅನಿವಾರ್ಯ ಮತ್ತು ಅವಶ್ಯವು ಎಂದು ಎಲ್ಲ ಸುಧಾರಣಾವಾದಿಗಳ ಸ್ಪಷ್ಟ ನಿಲುವು ಆಗಿದೆ. ಈ ದೇಶದಲ್ಲಿ ಧರ್ಮ ಸುಧಾರಣೆಯಾಗದ ಹೊರತು

ಮಿಕ್ಕುಳಿದ ಎಲ್ಲ ಸುಧಾರಣೆಗಳು ವ್ಯರ್ಥವಾಗುತ್ತವೆ ಎಂದಿದ್ದಾರೆ. ಸ್ವಾಮಿ ವಿವೇಕಾನಂದರು ಹೇಳುವುದೇನೆಂದರೆ – "If religion in India were perfect everything would be automatically perfect"[೧] ಎಂದಿದ್ದಾರೆ. ಅಂದರೆ ಭಾರತದಲ್ಲಿ ಧರ್ಮವೊಂದು ಪರಿಪೂರ್ಣವಾದರೆ ಮಿಕ್ಕುಳಿದವುಗಳೆಲ್ಲವೂ ತನ್ನಿಂದ ತಾವೇ ಪರಿಪೂರ್ಣವಾದಂತೆ ಎಂದು. ಹಾಗಾಗಿಯೇ ಸ್ವಾಮಿ ವಿವೇಕಾನಂದರು ಮತ್ತೊಂದು ಕಡೆ ಹೇಳುವುದು – "Dharma is the bed-rock of Indian Socio-political theory"[೨] ಎಂದು. ಅಂದರೆ ಭಾರತೀಯ ಸಮಾಜೋ–ರಾಜಕೀಯ ಸುಧಾರಣೆಗೆ ತಾಯಿಬೇರಿನಂತಿರುವ ಧರ್ಮವೇ ಮೂಲ ಮಾನದಂಡವೆಂದು ಹೇಳುವುದು. ಹಾಗಾಗಿ ಪ್ರಸ್ತುತ ಭಾರತೀಯರ ಧರ್ಮ, ಧರ್ಮವನ್ನು ಪೋಷಿಸುವ ಧರ್ಮಗ್ರಂಥಗಳ ಪ್ರತಿಪಾದನೆಯೇ ಭಾರತೀಯರ ಇಂದಿನ ಬದುಕಾಗಿ ಹೋಗಿದೆ. ಹೀಗೆಂದ ಮಾತ್ರಕ್ಕೆ ವೇದಶಾಸ್ತ್ರ ಪುರಾಣಾಗಮದಂತ, ಶೃತಿಸ್ಮೃತಿ ಆಗಮನಿಗಮ, ರಾಮಾಯಣ, ಮಹಾಭಾರತದ ಭಗವದ್ಗೀತೆಯಂತಹ ಎಲ್ಲಾ ವಿಷಯಗಳು ಸಂಪೂರ್ಣವಾಗಿ ನಿರುಪಯುಕ್ತವೆಂದಾಗಲಿ, ಭಾರತೀಯ ಸಂಘರ್ಷಕ್ಕೆ ಎಡೆಮಾಡಿಕೊಡುತ್ತವೆಂದಾಗಲಿ ಅರ್ಥವಲ್ಲ. ಉಪಯುಕ್ತವಾಗುವ ಅದೆಷ್ಟೋ ಮೌಲ್ಯಭರಿತ ವಿಷಯಗಳು ಅಲ್ಲಿದ್ದರೂ ಜನಾಂಗೀಯ ದ್ವೇಷಕ್ಕೆ ಕಾರಣವಾಗುವ ಅದೆಷ್ಟೊ ಚಿಂತನೆಗಳು ಅಲ್ಲಿ ಬೆರೆತು ಹೋಗಿವೆ. ಉದಾಹರಣೆಗಾಗಿ ಯುಗ್ವೇದದ ೧೦ನೇ ಮಂಡಲವಾದ ಪುರುಷ ಸೂಕ್ತವೆಂಬ ೯೦ನೆಯ ಅಧ್ಯಾಯದ ೧೨ನೇ ಶ್ಲೋಕವು ವರ್ಣ ಉಗಮದ ಕುರಿತು ಈ ರೀತಿ ಹೇಳುತ್ತದೆ.

**"ಬ್ರಾಹ್ಮಣೋಸ್ಯ ಮುಖಮಾಸೀದ್ ಬಾಹೂ ರಾಜನ ಕೃತಃ ।**
**ಊರು ತದಸ್ಯ ಯದ್‌ವೈಶ್ಯ ಪದಭ್ಯಾಂ ಶೂದ್ರೋ ಅಜಾಯತಃ ॥"**[೩]

ಅಂದರೆ, ಬ್ರಹ್ಮನ ಮುಖದಿಂದ ಬ್ರಾಹ್ಮಣನೂ, ತೋಳುಗಳಿಂದ ಕ್ಷತ್ರಿಯನೂ, ತೊಡೆಗಳಿಂದ ವೈಶ್ಯನೂ, ಪಾದಗಳಿಂದ ಶೂದ್ರನೂ ಹುಟ್ಟಿ ಬಂದಿದ್ದಾರೆ ಎಂದು ಹೇಳಿದೆ. (ಋಗ್ವೇದ ೧೦/೯೦/೧೨)

ಈ ಮೇಲಿನ ಚತುರ್ವರ್ಣದಲ್ಲಿ ಶೂದ್ರರಿಗೆ ಎಲ್ಲ ರೀತಿಯ ಅವಕಾಶಗಳನ್ನು ನಿರಾಕರಿಸಲಾಗಿದೆ. ಇನ್ನೂ ಈ ಚತುರ್ವರ್ಣದಿಂದ ವಂಚಿತರಾದ ಮತ್ತು ಬಹಿಷ್ಕೃತರಾದ ಅತೀಶೂದ್ರರ ಸ್ಥಿತಿಯಂತೂ ಹೇಳತೀರದು.

ಇನ್ನೂ ಹಿಂದೂ ಧರ್ಮದ ಎಲ್ಲವನ್ನು ಕೃಷಿ ಮಾಡಿ ಅವೆಲ್ಲವನ್ನು ಕ್ರೂಢೀಕರಿಸಿದ ಮನುಸ್ಮೃತಿಯ ೧೨ನೇ ಅಧ್ಯಾಯದ ೨೬೮೪ ಶ್ಲೋಕಗಳು ಬ್ರಾಹ್ಮಣರ ಪ್ರಭುತ್ವವನ್ನು ಶೂದ್ರಾತೀಶೂದ್ರದ ದಾಸ್ಯತ್ವದ ಕುರಿತು ಹೇಳಿದ್ದೆ ಹೇಳಿದ್ದು. ಉದಾಹರಣೆಗಾಗಿ;

**"ನ ಶೂದ್ರಾಯ ಮತಿಂ ದದ್ಯಾನ್ನೋಚ್ಛಿಷ್ಟಂ ನ ಹವಿಷ್ಕೃತಮ್ ।**
**ನ ಚಾಸ್ಯೋಪದೀಶ್ಯೇದ್ಧರ್ಮಂ ನ ಚಾಸ್ಯ ವ್ರತಮಾದಿಶೇತ್ ॥"**[೪] **(ಮನು–೪/೮೦)**

ಅಂದರೆ, ಶೂದ್ರನಿಗೆ ಐಹಿಕ ಫಲದ ಜ್ಞಾನವನ್ನು ಉಪದೇಶಿಸಬಾರದು. ಮತ್ತು ಎಂಜಲನ್ನೂ ಹೋಮ (ಯಜ್ಞ) ಶೇಷನ್ನೂ ಆತನಿಗೆ ಕೊಡಕೂಡದು. ಆತನಿಗೆ ಧರ್ಮವನ್ನು ಉಪದೇಶಿಸಬಾರದು. ಹಾಗೆಯೇ ಆತನಿಗೆ ಪ್ರಾಯಶ್ಚಿತ್ತ ರೂಪ ವ್ರತವನ್ನೂ ಉಪದೇಶಿಸಬಾರದು.

**"ಯೋ ಹ್ಯಸ್ಯ ಧರ್ಮಮಾಚಷ್ಟೇ ಯಶ್ಚೈವಾದಿಶತಿ ವ್ರತಮ್ ।**
**ಸೋಽಸಂವೃತಂ ನಾಮ ತಮಃ ಸಹ ತೇನೈವ ಮಜ್ಜತಿ ॥"**[೫] **(ಮನು–೪/೮೧)**

ಅಂದರೆ, ಯಾವನು ಶೂದ್ರನಿಗೆ ಧರ್ಮವನ್ನುಪದೇಶಿಸುವನೋ, ಯಾವನು ಅವನಿಗೆ ಪ್ರಾಯಶ್ಚಿತ್ತಾದಿ ವ್ರತವನ್ನು ಉಪದೇಶಿಸುವನೋ ಆ ಉಪದೇಶಕನು ಆ ಶೂದ್ರ ಸಮೇತನಾಗಿ ಅಸಂವೃತವೆಂಬ ಕಗ್ಗತ್ತಲೆಯ ನರಕಕ್ಕೆ ಹೋಗುವನು ಎಂಬುವದು ಇದರ ತಿರುಳು.

**"ಯಸ್ಯ ಶೂದ್ರಸ್ತು ಕುರುತೇ ರಾಜ್ಞೋ ಧರ್ಮವಿವೇಚನಮ್ ।**
**ತಸ್ಯ ಸೀದತಿ ತದ್ರಾಷ್ಟ್ರಂ ಪಂಕೇ ಗೌರವ ಪಶ್ಯತಃ ॥"**[೬] **(ಮನು–೮/೨೧)**

ಅಂದರೆ ಯಾವ ರಾಜ್ಯದಲ್ಲಿ ಶೂದ್ರನಿಗೆ ಧರ್ಮ ವಿವೇಚನೆ ಮಾಡಲು ಆಸ್ಪದ ಸಿಗುತ್ತದೆಯೋ, ಆ ರಾಜ್ಯವು ಹುದುಲಿನಲ್ಲಿ ಸಿಕ್ಕ ಆಕಳಿನಂತೆ ತೊಳಲಾಡುವುದು

**"ಯದ್ರಾಷ್ಟ್ರಂ ಶೂದ್ರಭೂಯಿಷ್ಠಂ ನಾಸ್ತಿ ಕಾಕ್ರಾಂತಮದ್ವಜಮ್ ।**

---

೧. Rathna Reddy A.V. – *Political Philosophy of Swami Vivekananda*, Sterling Publishers Pvt.Ltd., New Delhi, ೧೯೮೪, P-XI.

೨. Ibid, P-X.

೩ ಕುಮಾರ ಕಕ್ಕಯ್ಯ ಪೋಳ್ – "ಚಾತುರ್ವರ್ಣ ಧರ್ಮದರ್ಶನ", ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧, ಪು.೧.

೪ ಶ್ರೀನಿವಾಸ ಭಟ್ಟ ಬಿ. – "ಮನುಸ್ಮೃತಿ", ಶ್ರೀಕೃಷ್ಣ ಮುದ್ರಣಾಲಯ, ಉಡುಪಿ, ೧೯೪೪, ಪು.೧೯೫.

೫ ಚಕ್ರಕೋಡಿ ಈಶ್ವರಶಾಸ್ತ್ರಿ – "ಮನುಸ್ಮೃತಿ", ಸಮಾಜ ಪುಸ್ತಕಾಲಯ, ಧಾರವಾಡ, ೧೯೬೭, ಪು.೧೫೨.

೬ ಶ್ರೀನಿವಾಸ ಭಟ್ಟ ಬಿ. – "ಮನುಸ್ಮೃತಿ", ಶ್ರೀಕೃಷ್ಣ ಮುದ್ರಣಾಲಯ, ಉಡುಪಿ, ೧೯೪೪, ಪು.೩೭೦.

**ವಿನಶ್ಯತ್ಯಾಶು ತತಸ್ಕೃತ್ಸ್ನಂ ದುರ್ಭಿಕ್ಷವ್ಯಾಧಿಪೀಡಿತಮ್ ॥"[೭] (ಮನು–೮/೨೨)**

ಅಂದರೆ, ಯಾವ ರಾಷ್ಟ್ರದಲ್ಲಿ ಶೂದ್ರರು ಮತ್ತು ನಾಸ್ತಿಕರು ಹುಟ್ಟಿ ದ್ವಿಜರ ಮೇಲೆ ಆಕ್ರಮಣ ಮಾಡುವರೋ ಅಲ್ಲಿ ವಿನಾಶವಿರುತ್ತದೆ. ಆ ರಾಷ್ಟ್ರವು ದುರ್ಭಿಷೆಗೆ ಈಡಾಗುವುದು ಎಂದು ಹೇಳಿದೆ.

ಯಾವ ಸಾಮಾಜಿಕ ವ್ಯವಸ್ಥೆಯನ್ನು ಮನುಧರ್ಮದ ಗಟ್ಟಿ ತಳಪಾಯದ ಮೇಲೆ ನಿಲ್ಲಿಸಿರುತ್ತಾನೆಯೋ, ಯಾವ ಸಾಮಾಜಿಕ ವ್ಯವಸ್ಥೆಯ ಪ್ರತಿಯೊಂದಕ್ಕೂ ಧರ್ಮವೇ ಮೂಲ ತಳಹದಿಯಾಗಿರುತ್ತದೆಯೋ ಆ ಧರ್ಮವನ್ನೇ ಇಲ್ಲಿ ಶೂದ್ರರಿಗೆ ವಂಚಿಸಲಾಗಿದೆ. ಆತ್ಮದ ವಿಕಾಸಕ್ಕೆ ಮಾನವ ಸಮಾಜದ ಶಾಂತಿ ಮತ್ತು ವ್ಯವಸ್ಥೆಗೆ ಧರ್ಮವೇ ಮೂಲವೆಂದು ಹೇಳುವ ಮನು ಇಡೀ ಶೂದ್ರರನ್ನು ಮತ್ತು ಅತೀಶೂದ್ರರನ್ನು ಧರ್ಮದಿಂದ ಬಹಿಷ್ಕರಿಸಿದ್ದಾನೆ.

**"ವಿಪ್ರಾಣಾಂ ವೇದವಿದುಷಾಂ ಗೃಹಸ್ಥಾನಾಂ ಯಶಸ್ವಿನಾಂ ।**
**ಶುಸ್ರೂಷೈವತು ಶೂದ್ರಸ್ಯ ಧರ್ಮೋ ನೈಶ್ರೇಯಸಃ ಪರಃ ॥"[೮] (ಮನು–೯/೩೩೪)**

ಅಂದರೆ, ಬ್ರಾಹ್ಮಣರ, ವೇದಪಂಡಿತರ, ಸಜ್ಜನರ, ದೊಡ್ಡವರ ಸೇವೆ ಮಾಡುವದೇ ಶೂದ್ರನ ಧರ್ಮವು ಶೂದ್ರನಿಗೆ ಸೇವೆಗಿಂತ ಶೇಷವಾದ ಬೇರೆ ಧರ್ಮವಿಲ್ಲ. ಸೇವೆಯಿಂದಲೇ ಅವನಿಗೆ ಮುಕ್ತಿಯು ಎಂದು ಅರ್ಥವು.

**"ಧರ್ಮೋಪದೇಶಂ ದರ್ಪೇಣ ವಿಪ್ರಾಣಾಮಸ್ಯ ಕುರ್ವತಃ ।**
**ತಪ್ತ ಮಾಸೇಚಯೇತ್ತೈಲಂ ವಕ್ತ್ರೇ ಶ್ರೋತ್ರೇ ಚ ಪಾರ್ಥಿವಃ ॥"[೯] (ಮನು–೮/೨೭೨)**

ಅಂದರೆ, ಶೂದ್ರನಾದವನು, ಬ್ರಾಹ್ಮಣನೊಡನೆ ಹಕ್ಕಿನಿಂದ ಧರ್ಮದ ಬಗ್ಗೆ ವಾದ ಹಾಕಲು ಬಂದರೆ, ಕಾಸಿದ ಎಣ್ಣೆಯನ್ನು ಅವನ ಕಿವಿಗಳಲ್ಲಿ ಹಾಕಬೇಕು. ಮುಖಕ್ಕೆ ಎರಚಬೇಕು, ಮೈಮೇಲೆ ಸುರುವಬೇಕು.

**"ಯಃ ಕಶ್ಚಿತ್ಕಸ್ಯಚಿದ್ಧರ್ಮೋ ಮನುನಾ ಪರಿಕೀರ್ತಿತಃ ।**
**ಸ ಸರ್ವೋಽಭಿಹಿತೋ ವೇದೇ ಸರ್ವಜ್ಞಾನಮಯೋ ಹಿ ಸಃ ॥"[೧೦] (ಮನು–೨/೭)**

[ಅಂದರೆ, ಮನು ಸರ್ವಜ್ಞನಾದ ಪಾರಂಗತನು. ಮನು ಹೇಳಿದುದೆಲ್ಲವೂ ವೇದಾದಿ ಧರ್ಮಗ್ರಂಥಗಳಲ್ಲಿ ಹೇಳಿದೆ. ಹಾಗಾಗಿ ಭಾರತೀಯರ ಬದುಕಿನಲ್ಲಿ ಇದು ಹಾಸುಹೊಕ್ಕಾಗಿ ಹೆಣೆದುಕೊಂಡಿದೆ.

ಈ ಮೇಲಿನ ೮ ಶ್ಲೋಕಗಳನ್ನು ಅವಲೋಕಿಸುವುದೇನೆಂದರೆ "ಧರ್ಮೋ ರಕ್ಷತಿ ರಕ್ಷಿತಾಃ" ಧರ್ಮವನ್ನು ರಕ್ಷಿಸಿದವರನ್ನು ಧರ್ಮವು ಅವರನ್ನು ರಕ್ಷಿಸುತ್ತದೆ ಎಂದು. ಆದರೆ ಧರ್ಮದಿಂದ ಬಹಿಷ್ಕೃತರಾದ ಇವರು ಧರ್ಮವನ್ನು ರಕ್ಷಿಸುವದಾದರೂ ಹೇಗೆ, ಧರ್ಮವು ಇವರನ್ನು ರಕ್ಷಿಸುವುದಾದರೂ ಹೇಗೆ? ಅವರನ್ನು ಸರ್ವಕಾಲವು ಗುಲಾಮರಾಗಿ ಇಡುವುದು ಧರ್ಮವೆಂದು ಕರೆಯಿಸಿಕೊಳ್ಳುವುದಾದರೂ ಹೇಗೆ? ಹತ್ತು ಸಲ ದೇವರು ಧರ್ಮವನ್ನು ರಕ್ಷಿಸಲು ದಶಾವತಾರವೆತ್ತಿ ಬಂದರೂ ಇವರನ್ನು ರಕ್ಷಿಸುವುದು ದೇವರಿಗೆ ಹೊಳಿಯಲಿಲ್ಲವೆ? "ಧೃಧಾರೆಯತಿ" ಅಂದರೆ ಬಿದ್ದವರನ್ನು ಎತ್ತು ಅಥವಾ ಉದ್ಧರಿಸುವುದು ಎಂಬ ಧರ್ಮದ ಉಕ್ತಿ ಇವರ ಪಾಲಿಗೇಕೆ ಇಲ್ಲದಾಯಿತೇ? ಹೀಗೊಂದು ವೇಳೆ ತಿಳಿಯುವುದಾದರೆ ಆ ಧರ್ಮವೇ ಧರ್ಮಕ್ಕೆ ಒಂದು ದೊಡ್ಡ ಕಳಂಕವಲ್ಲವೇ ಎಂಬೆಲ್ಲ ಪ್ರಶ್ನೆಗಳು ಬಂದು ನಿಲ್ಲುತ್ತವೆ. ಧರ್ಮ ಮತ್ತು ದೇವರುಗಳ ಹೆಸರಿನಲ್ಲಿ ಅಧರ್ಮಿಗಳು ನಡೆಸುವ ಧರ್ಮ ದ್ರೋಹದ ಕೆಲಸಗಳಲ್ಲದೆ ಮತ್ತೇನು ಅಲ್ಲವೆಂಬುದು ಸ್ಪಷ್ಟವಾಗುತ್ತದೆ. ಸತತ ಖೂನಿಕೈದಿಗಳಂತೆ ಬಂಧನಗಳ ಮೇಲೆ ಬಂಧನಗಳಿಂದ ಬಂಧಿತರಾದ ಸ್ವದೇಶಿ ಸ್ವಧರ್ಮೀಯ ಶೂದ್ರಾತೀಶೂದ್ರರು ಮಾಡಿದ ತಪ್ಪಾದರೂ ಏನು. ಇಂತಹ ಧರ್ಮಶಾಸನಗಳ ಅಡಿಯಲ್ಲಿ ನರಕಯಾತನೆಗಿಂತ ಸಾವಿರ ಪಟ್ಟು ಎಂದೂ ಮುಗಿಯದ ಈ ಕರಾಳ ನರಕಯಾತನೆಯ ಔಚಿತ್ಯವಾದರೂ ಏನು ಎಂದು ಕೇಳುವುದೇ ಸಾಮಾಜಿಕ ನ್ಯಾಯದ ಪ್ರಸ್ತುತತೆಯು ಇಲ್ಲಿ ಎದ್ದು ಕಾಣುತ್ತದೆ. ಒಬ್ಬ ವ್ಯಕ್ತಿಯಾಗಲಿ, ವ್ಯಕ್ತಿ ಸಮೂಹವಾಗಲಿ ಬದುಕಲು ಆರ್ಥಿಕ ಸಂಪನ್ಮೂಲಗಳು(Economic Resources) ಬೇಕು. ಸರಿಯಾಗಿ ಬದುಕಲು ಶಿಕ್ಷಣವೂ (Education) ಬೇಕು. ಬಾಹ್ಯ ಮತ್ತು ಆಂತರಿಕ ಸದೃಢತೆಗೆ ರಾಜಕೀಯ ಮತ್ತು ಸಾಂಸ್ಕೃತಿಕ ಸಂಪನ್ಮೂಲಗಳು ಬೇಕು. ಇವಾವ ಸೌಲಭ್ಯಗಳು ಇಲ್ಲದೆ ಸಾವಿರಾರು ವರ್ಷಗಳ ಪರ್ಯಂತ ಮತ್ತು ಎಲ್ಲ ನಾಗರಿಕ ಸೌಲಭ್ಯಗಳಿಂದ ವಂಚನೆಗೊಳಪಡಿಸಿದ ಅನಾಗರಿಕ ಸ್ಥಿತಿಯಲ್ಲುಳಿದ ಇಂದು ಆ ಎಲ್ಲ ಸಮುದಾಯಗಳ ಸ್ಥಿತಿಯು ತುಂಬಾ ಚಿಂತಾಜನಕ ಸ್ಥಿತಿಯಲ್ಲುಳಿದಿವೆ. ಸಮಾಜದ ಮುಖ್ಯವಾಹಿನಿಯಲ್ಲಿ ಅವರನ್ನು ತರದ ಹೊರತು ರಾಷ್ಟ್ರ ಕಟ್ಟುವ ಪ್ರಕ್ರಿಯೆಯು(Nation building Process) ಪರಿಪೂರ್ಣವಾಗದು. ಜಾತಿಯ ಅಸ್ತಿತ್ವ ಎಲ್ಲಿಯತನಕ ಜೀವಂತವಿರುತ್ತದೆಯೋ ಅಲ್ಲಿಯ ತನಕವೂ ಸಾಮಾಜಿಕ ನ್ಯಾಯದ ಅಸ್ತಿತ್ವಕ್ಕೆ ಮೀಸಲಾತಿಯ ಮುಂದುವರಿಕೆಯು ಅವಶ್ಯವಾಗಿದೆ. ಇವತ್ತಿಗೂ ಐಯ್ಯಪ್ಪ ಸ್ವಾಮಿ ದೇವಸ್ಥಾನದಂತಹ ಪ್ರವೇಶ ಪ್ರಕರಣಗಳು ರಾಜ್ಯ ರಾಷ್ಟ್ರಮಟ್ಟದ ಪ್ರಕರಣಗಳು ಎಂದು ಚರ್ಚೆಯಾಗುತ್ತಿರುವ ಈ ದೇಶದಲ್ಲಿ,

---

[೭] ಅದೇ, ಪು.೩೭೦.

[೮] ಶ್ರೀನಿವಾಸ ಭಟ್ಟ ಬಿ. – "ಮನುಸ್ಮೃತಿ", ಶ್ರೀಕೃಷ್ಣ ಮುದ್ರಣಾಲಯ, ಉಡುಪಿ, ೧೯೪೪, ಪು.೫೪೩–೪೪.

[೯] ಅದೇ, ಪು.೪೩೧.

[೧೦] ಚಕ್ರಕೋಡಿ ಈಶ್ವರಶಾಸ್ತ್ರಿ – "ಮನುಸ್ಮೃತಿ", ಸಮಾಜ ಪುಸ್ತಕಾಲಯ, ಧಾರವಾಡ, ೧೯೬೭, ಪು.೨೭.

ಮರ್ಯಾದೆಯಂತಹ ಹತ್ಯೆಗಳು ಎಗ್ಗಿಲ್ಲದೇ ಸಾಗಿದ ಈ ನಾಡಿನಲ್ಲಿ, ಕಂಬಾಲಪಳ್ಳಿಯಂತಹ ದಲಿತರ ಸಾಮೂಹಿಕ ಮಾರಣ ಹೋಮಗೈಯುತ್ತಿರುವ ನೆಲದಲ್ಲಿ, ಹರಿಯಾಣದಂತಹ ರಾಜ್ಯಗಳಲ್ಲಿ ದಲಿತ ಸರಪಂಚರಿಗೆ ಇವತ್ತಿಗೂ ಕೂಡ್ರಲು ಕುರ್ಚಿಗಳೇ ಇಲ್ಲದಂತಹ ಪರಿಸ್ಥಿತಿಯಲ್ಲಿ, ಉತ್ತರಪ್ರದೇಶದ ಬಂದೇಲಖಂಡವೆಂಬ ಪಂಚಾಯತಿಗಳಲ್ಲಿ ಪ್ರಮುಖ ತೀರ್ಮಾನ ತೆಗೆದುಕೊಳ್ಳುವಾಗ ದಲಿತರನ್ನು ಊರ ಹೊರಗಿನ ದೇವಾಸ್ಥಾನ ಹಟ್ಟುವ ರೀತಿ, ಈ ದೇಶದ ರಾಜಧಾನಿಯಾದ ದೆಹಲಿಯ ಹೆಸರುವಾಸಿಯಾಗಿರುವ ಪ್ರಸಿದ್ಧ ವೈದ್ಯಕೀಯ ಕಾಲೇಜು ಹಾಸ್ಟೇಲ್‌ವೊಂದರಲ್ಲಿ ಕಾಯ್ದಿಟ್ಟ ಒಂದು ಅಂತಸ್ತಿನಲ್ಲಿ ಮಾತ್ರ ದಲಿತ ವಿದ್ಯಾರ್ಥಿಗಳಿರಬೇಕೆಂಬುದು, ಇಡೀ ದೇಶದ ಉದ್ದಗಲಕ್ಕೂ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು, ಬೀದಿ ಕಸಗಳನ್ನು ಗೂಡಿಸುವುದು ದಲಿತರಿಗೆಯೇ ಮೀಸಲಾಗಿರಿಸುವುದು, ಮೇಲ್ವರ್ಗದವರ ಓಣಿಗಳನ್ನು ದಾಟುವಾಗ ದಲಿತರು ತಮ್ಮ ಚಪ್ಪಲಿ ತೆಗೆದಿಡುವುದು, ದಲಿತ ಪೋಸ್ಟಮನ್ನರಿದ್ದರೆ ಸೈಕಲ್ಲಿದ್ದರೂ ನಡೆದುಕೊಂಡೆ ಟಪಾಲು ಹಂಚುವುದು, ಮದುವೆಯಂತಹ ಸಂದರ್ಭಗಳಲ್ಲೂ ದಲಿತರು ಕುದುರೆ ಮೇಲೆ ಮೆರವಣಿಗೆ ಹೋಗದಿರುವುದು, ಜಾತಿಯ ಕಾರಣಕ್ಕಾಗಿ ಶಹರುಗಳಲ್ಲಿ ಮನೆ ಭಾಡಿಗೆ ಕೊಡದಿರುವ ಸಂಗತಿಗಳು, ಪತ್ರಕರ್ತ ಪಿ.ಸಾಯಿನಾಥ ದೇಶದಾದ್ಯಂತ ಸಂಚರಿಸಿ ದಲಿತರಿಗಾಗಿ ಆಗುತ್ತಿರುವ ಅನ್ಯಾಯಗಳ ಅಧ್ಯಯನಗೈದು ಪಟ್ಟಿ ಮಾಡಿದಂತಹ ಕೆಲವಷ್ಟೇ ಸಂಗತಿಗಳನ್ನು ಇಲ್ಲಿ ಉದಾಹರಿಸಲಾಗಿದೆ. ಮೀಸಲಾತಿಯ ಕಾರಣದಿಂದಾಗಿಯೇ ಸಾರ್ವಜನಿಕ ವಲಯಗಳಲ್ಲಿ ಒಬ್ಬ ಸಾಮಾನ್ಯ ಗುಮಾಸ್ತರುಗಳು ಮೇಲಾಧಿಕಾರಿಗಳ ವಿರುದ್ಧ ಪರೋಕ್ಷವಾಗಿ ಸಹೋದ್ಯೋಗಿಗಳ ಎದುರೆ ಎಗ್ಗಿಲ್ಲದೆ ಅವಮಾನಿಸುವ ರೀತಿಯಲ್ಲಿ ಮಾತನಾಡಿಕೊಳ್ಳುವುದು ಯಥಾವತ್ತಾಗಿ ನಡೆದಿವೆ. ಮೀಸಲಾತಿಯ ಉದ್ದೇಶವನ್ನೇ ಅರ್ಥಮಾಡಿಕೊಳ್ಳದ ರಾಜಕೀಯ ನಾಯಕರುಗಳು, ಮೀಸಲಾತಿ ಕ್ಷೇತ್ರದಿಂದ ಆಯ್ಕೆಯಾಗುವ ದಲಿತ ನಾಯಕರುಗಳು, ದಲಿತರಲ್ಲಿಯೇ ದಲಿತೇತರಂತೆ ವರ್ತಿಸುವ ದಲಿತ ನಾಯಕರುಗಳು, ಜಾತಿಯತೆಯು ತೊಲಗಿದೆಯೆಂಬ ಭ್ರಮೆಯಲ್ಲಿರುವ ದಲಿತೇತರ ಜನತೆಯು ತಮ್ಮ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗಿದೆ. ಡಾ॥ ಅಂಬೇಡ್ಕರ್‌ರವರು ಹೇಳಿದಂತೆ "Rights are protected not by law but by the Social and Moral conscience of the Society"[೧೧] ಎಂಬ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಅಂದರೆ ದಲಿತರಿಗೆ ಕೊಡಮಾಡಿದ ಹಕ್ಕುಗಳು ಕಾಯ್ದೆಯಿಂದ ರಕ್ಷಿತವಾಗದೆ, ಸಾಮಾಜಿಕ ನೈತಿಕತೆಯ ಪ್ರಜ್ಞೆಯಿಂದ ಮಾತ್ರ ರಕ್ಷಿತವಾಗಬಲ್ಲವು" ಎಂಬ ಸತ್ಯವನ್ನು ತಿಳಿಯುವ ಕಾಲ ಬದಲಿ ಎಂದು ಹೇಳುತ್ತ ಬುದ್ಧ, ಬಸವ, ಸ್ವಾಮಿ ವಿವೇಕಾನಂದರು ಮತ್ತು ಕನಕದಾಸರು ಕಂಡರಿತ ಭಾರತೀಯರ ರಾಷ್ಟ್ರ ಕಟ್ಟುವ ಕನಸು ಕೈಗೂಡವಂತಾಗಲೆಂದು ಹಾರೈಸುವೆ.

## ಆಧಾರ ಗ್ರಂಥಗಳು :


1. Rathna Reddy A.V.; - *Political Philosophy of Swami Vivekananda*, Sterling Publishers Pvt.Ltd., New Delhi, ೧೯೮೪.
2. ಕುಮಾರ ಕಕ್ಕಯ್ಯ ಪೋಳ್ ; - *ಚಾತುರ್ವರ್ಣ ಧರ್ಮದರ್ಶನ*, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧.
3. ಶ್ರೀನಿವಾಸ ಭಟ್ಟ ಬಿ.; – ಮನುಸ್ಮೃತಿ, ಶ್ರೀಕೃಷ್ಣ ಮುದ್ರಣಾಲಯ, ಉಡುಪಿ, ೧೯೪೪.
4. ಚಕ್ರಕೋಡಿ ಈಶ್ವರಶಾಸ್ತ್ರಿ ; – ಮನುಸ್ಮೃತಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೭.
5. Ahir C.C.; - *The Legacy of Dr. Ambedkar (Bharat Ratna)*, B.R.Publishing Corporation, Delhi, ೧೯೯೦.


[೧೧] Ahir C.C.; - *The Legacy of Dr. Ambedkar (Bharat Ratna)*, B.R.Publishing Corporation, Delhi, ೧೯೯೦, p.೩೦೨.